ಸೂಚಿಸಿದ್ದರು. ಆದರೆ ಪ್ರದರ್ಶಿತಗೊಂಡ 'ತಮಾಷಾ'ದಲ್ಲಿ ಯಥಾಪ್ರಕಾರ ಅಶ್ಲೀಲ ಪ್ರಸಂಗಗಳು ಕಡಿಮೆಯಾಗಿದ್ದವು. ಅಸಲ್ ತಮಾಷಾ ಆಡಿರಲೇ ಇಲ್ಲ. ಹೀಗೇಕೆಂದು ಆಯೋಜಕರು ತಮಾಷಾ ತಂಡವನ್ನು ಕೇಳಿದರು. ಆಗ ತಮಾಷಾ ತಂಡದವರು, 'ನೀವು ನಿಮ್ಮ ಹೆಂಡತಿ, ತಾಯಿ, ಮಕ್ಕಳೊಂದಿಗೆ ತಮಾಷಾ ನೋಡಲು ಬಂದಿರುತ್ತೀರಿ. ಅವರ ಮುಂದೆ ಅಸಲ್ ತಮಾಷ್ ಮಾಡುವುದು ಸಂಸ್ಕೃತಿಯಲ್ಲ' ಎಂದು ಉತ್ತರಿಸಿದರು. ಅವರ ಉತ್ತರವನ್ನು ಕೇಳಿದ ಬೇಂದ್ರೆಯವರ ಕಣ್ಣಲ್ಲಿ ನೀರು. ಬೇಂದ್ರೆಯವರೆಂದರು, 'ನಿಮ್ಮ ಕೈಯಲ್ಲಿ ಭಾರತೀಯ ಸಂಸ್ಕೃತಿ ಸುರಕ್ಷಿತವಾಗಿದೆ.'

★★★

ಬೇಂದ್ರೆಯವರು ಒಂದು ಸಲ ಭಾಳ ಮೋಜಿನ ಕಥೆ ಹೇಳಿದ್ರು. ಏನಪ್ಪಾ ಆ ಕಥೆ ಅಂದ್ರ, ಒಬ್ಬ ರಾಜ ಇದ್ದ. ಒಂದು ದಿವಸ ಆಸ್ಥಾನದೊಳಗ ಯಾರೋ ಒಬ್ರು ಕನ್ನಡಿ ತಂದಿಟ್ಟಿದ್ರಂತ. ಆ ರಾಜ ಕನ್ನಡೀನೆ ನೋಡಿದ್ದಿಲ್ಲಂತ. ತಪ್ಪಿ ಆ ದಿವಸ ಅಂವ ಅಲ್ಲಿಟ್ಟ ಕನ್ನಡಿಯೊಳಗ ಮಾರಿ ನೋಡ್ಕೊಂಡ. ನೋಡ್ಕೊಂಡ ಕೂಡ್ಲೆ ಅಳಲಿಕ್ಕೆ ಸುರು ಮಾಡಿಬಿಟ್ಟ. ಬಹಳಷ್ಟು ಅಳಲಿಕ್ಕ ಹತ್ತಿದ. ಯಾಕ್ ಅಳ್ತಿ? ಅಂತ ಕೇಳಿದ್ರು ಅಂವ ಏನೂ ಉತ್ತರ ಹೇಳಲಿಲ್ಲ. ಬರಿ ಅಳ್ತಾನೆ ಕೂತ. ಆಗ ಅಂವ ಅಳತಾನಂತ ಪ್ರಧಾನಿ ಅಳಲಿಕ್ಕೆ ಹತ್ತಿದ. ಪ್ರಧಾನಿ ಅಳತಾನಂತ ಸೇನಾಪತಿ ಅಳಲಿಕ್ಕೆ ಹತ್ತಿದ. ಸಭಿಕರು ಅಳಲಿಕ್ಕೆ ಹತ್ತಿದ್ರು. ಎಲ್ಲರೂ ಅಳಲಿಕ್ಕೆ ಹತ್ತಿದ್ರು. ಕಡೇಗೊಬ್ಬ ಕೇಳಿದ: 'ಅಪಾ ನೀ ಎಷ್ಟೊತ್ತಾರು ಅಳು. ಆದ್ರ ನೀ ಯಾಕ್ ಅಳ್ತಿ ಹೇಳು.' 'ನೋಡು ತಮ್ಮಾ ಈ ಕನ್ನಡಿ ಅದಽಲ ಈ ಕನ್ನಡಿಯೊಳಗ ನನ್ನ ಮಾರಿ ನೋಡ್ಕೊಂಡೆ. ನಾ ಹೀಂಗಿದ್ದೀನಾ, ನಾ ಇಷ್ಟು ಭಯಾನಕ ಇದ್ದೀನಾ? ಅಂತ ಭಾಳ ಕೆಟ್ಟ ಅನಿಸಿ ಅಳ್ಲಿಕ್ಕೆ ಹತ್ತಿದೆ. ಮತ್ತ ನೀವ್ ಯಾಕ್ ಅಳ್ಲಿಕ್ ಹತ್ತೀರಿ?' ಎಂದು ಕೇಳಿದ ರಾಜ. ಆಗ ಪ್ರಧಾನಿ ಹೇಳಿದ, 'ಸ್ವಾಮಿ ನೀವು ಒಂದ್ ದಿವ್ಸ ನಿಮ್ಮ ಮಾರಿ ನೋಡ್ಕೊಂಡ್ ಅಳ್ಲಿಕ್ ಹತ್ತಿದ್ರಿ. ದಿನಾ ನಿಮ್ಮ ಮಾರಿ ನೋಡ್ತೇವಿ ನಾವು. ನಾವು ಎಷ್ಟು ಅಳಬೇಕು? ಅಂತ ನಾವ್ ಅಳಲಿಕ್ ಹತ್ತಿದ್ವಿ. ಒಂದೇ ದಿವ್ಸ ನೋಡಿ ನಿಮಗ ಇಷ್ಟು ದುಃಖ ಆತು. ನಾವು ದಿನಾ ಈ ಮಾರಿ ನೋಡ್ಬೇಕಾಗ್ತದ?'

'ಏನಪ್ಪಾ ಇದರ ಅರ್ಥ? ಈ ಕಥಿ ನಿನಗ ಯಾಕ್ ಹೇಳಿದೆ ಅಂತ ಕೇಳಿದ್ರ, ಅಪಾ ನಿನ್ನ ಅಂತಃಕರಣದ ಕನ್ನಡಿಯೊಳಗ ನಿನ್ನನ್ನ ನೀ ನೋಡ್ಕೊಳ್ಳಲಿಕ್ಕೆ ಕಲಿ. ನಿನಗೆ ಸಾಮಾನ್ಯವಾಗಿ ನಾನು ಹ್ಯಾಗಿದ್ದೀನಿ ಅಂಬೋದು ಗೊತ್ತಿರೋದಿಲ್ಲ. ನಿನ್ನ ಮುಖವಾಡಗಳಿರ್ತಾವ. ನೀನು ಅದನ್ನ ತೆಗೆದು ನೋಡ್ಲಿಕ್ಕೆ ಕಲಿಬೇಕೆ ಹೊರತಾಗಿ ಯಾವ್ಯಾವ್ದೋ ಹೊರಗಿನ ಸಂಗತಿಗಳನ್ನ ತಂದು ನಿನ್ನ ರೂಪ ಶೃಂಗರಿಸಿಕೊಳ್ಳಲಿಕ್ಕೆ ಹೋಗಬ್ಯಾಡ. ನಿನ್ನ ನಿಜವಾದ ವ್ಯಕ್ತಿತ್ವ ಬೆಳೀಬೇಕು ಅನ್ನೋದು ಭಾಳ ಮಹತ್ವದ್ದು.' ಈ ರೀತಿ ಭಾಳ ಮೋಜಿನ ಸಂಗತಿಗಳನ್ನ ಹೇಳ್ತಾ ಇದ್ರು.

★★★

ಬೇಂದ್ರೆಯವರು ಹನ್ನೆರಡು ವರ್ಷ ಕಾಲ ಸೊಲ್ಲಾಪುರದ ದಯಾನಂದ ಕಾಲೇಜಿನೊಳಗ ಸ್ನೇಹ ಸಮ್ಮೇಳನದ ಅಧ್ಯಕ್ಷರಾಗಿ ಇದ್ರು. ವರ್ಷಾ ವರ್ಷಾನು ಅಷ್ಟೇ ಉತ್ಸಾಹದಿಂದ, ಅಷ್ಟೇ ಸಂತೋಷದಿಂದ ಅವ್ರು ಕೆಲ್ಸ ಮಾಡ್ತಿದ್ರು. ಒಂದು ಸಲ ಪ್ರಾಧ್ಯಾಪಕರು ಕೇಳಿದ್ರು, 'ಏನ್ ಬೇಂದ್ರೆ ಎಷ್ಟು ವರ್ಷ ಆತು ಮಾಡ್ಲಿಕ್ ಹತ್ತಿ ಹುರುಪಿನಿಂದ. ಇನ್ನಾ ನಿನ್ನ ಹುರುಪು ಕಡಿಮೆ ಆಗಿಲ್ಲಲ್ಲ. ನನಗ ಭಾಳ ಆಶ್ಚರ್ಯ ಅನ್ನಿಸ್ತದ.' ಆಗ ಬೇಂದ್ರೆ ಒಂದು ಮಾತು ಹೇಳಿದ್ರು; ಭಾಳ ಮೋಜಿನ ಮಾತದು. ಇಂತಾ ಮಾತು ಹ್ಯಾಂಗ್ ಬರ್ತಿತ್ತೋ ಗೊತ್ತಿಲ್ಲ. ಏನ್ ಮಾತು ಹೇಳಿದ್ರು ಅಂದ್ರ, 'ನೋಡು ತಮ್ಮಾ, ತಾಯಿಗೆ ಅದು ಎಂಟನೆ ಹೆರಿಗೆ ಇರಬಹುದು. ಆದ್ರ ಹುಟ್ಟಿ ಬರೋ